


ಅನ್ನಿಸಿತ್ತು. ಅರೆ, ಇಷ್ಟೆಲ್ಲಾ ವರ್ಷಗಳು ಮರೆತೇಬಿಟ್ಟಿದ್ದ; ಅವಳೇಕೆ ನೆನಪಾದಳೆಂದು ಒಂದು ಕ್ಷಣ ಗಾಬರಿಗೆ ಬಿದ್ದ. ರಾತ್ರಿ ಬಿದ್ದ ಅಸ್ಪಷ್ಟ ಕನಸಿನಲ್ಲಿ ಯಾರೊಂದಿಗೂ ಕೈ ಹಿಡಿದು ಓಡಾಡಿದಂತೆ, ಕಾಲ್ಗೆಜ್ಜೆಯ ನಿನಾದ ಮೆಲ್ಲನೆ ಕಿವಿಗೆ ಅಪ್ಪಳಿಸಿದಂತೆ... ಎಲ್ಲೋ ಕನಸಿನ ಕೊಂಡಿಗಳು ಹಳಿ ತಪ್ಪಿದಂತೆ. ಗೋಕರ್ಣಕ್ಕೆ ಬಂದ ಮಹಿಮೆಯಿರಬೇಕೆ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಂಡವನು ಎದ್ದು ಹೊರಕ್ಕೆ ಬಂದ. ಬೆಳಕಿನ ಚಹರೆ ಆಗಸದಲ್ಲಿ ಕಾಣಿಸಿಕೊಂಡಿತ್ತಾದರೂ ಕೆಲವು ನಕ್ಷತ್ರಗಳು ವೋಲ್ಟೇಜ್ ಕಮ್ಮಿಯಾದಾಗ ಉರಿಯುವ ವಿದ್ಯುತ್ ಬಲ್ಬುಗಳಂತೆ ಇನ್ನೂ ತಿಣುಕುತ್ತಾ ಮಿನುಗುತ್ತಿದ್ದವು. ರೆಸಾರ್ಟ್‌ನಲ್ಲಿಳಿದುಕೊಂಡಿದ್ದ ಕೆಲವು ಪ್ರವಾಸಿಗರು ಕಡಲ ತೀರದಲ್ಲಿ ವಾಕಿಂಗ್ ಮಾಡುತ್ತಿದ್ದರು. ಅಲ್ಲಮ ಅನತಿ ದೂರವಿದ್ದ ಕಡಲ ಕಡೆಗೆ ನಡೆದಿದ್ದ. ಸುಮಾರು ಹದಿನೈದು ವರ್ಷಗಳ ಹಿಂದೆ ಶಿರಸಿಯ ಎಂ.ಎಂ. ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅಲ್ಲಮಪ್ರಭು ಬಿ.ಎಸ್ಸಿ. ಕೊನೆಯ ವರ್ಷದಲ್ಲಿ ಓದುತ್ತಿದ್ದ. ತಾನು ಕಾಮರ್ಸ್ ಓದಬೇಕೆಂದುಕೊಂಡಿದ್ದರೂ ಅಪ್ಪ, ''ಅದೇನು ಕಾಮರ್ಸ್ ಓದ್ತಿಯೋ ಅಲ್ಲಮ, ನೀನೇನು ಕೆಲಸ ಹಿಡಿದು ಹೋಗಬೇಕಾ? ಸೈನ್ಸ್ ಓದಿದರೆ ಒಳ್ಳೆಯ ತಿಳಿವಳಿಕೆ ಬರ್ತದೆ, ವೈಜ್ಞಾನಿಕವಾಗಿ ಯೋಚಿಸುವ ಶಕ್ತಿಯೂ ಬರುತ್ತೆ.'' ಎಂದು ಸೈನ್ಸ್‌ಗೆ ಸೇರಿಸಿದ್ದ. ಹಾಗಾಗಿ, ಓದಿನಲ್ಲಿ ಅಂಥ ಆಸಕ್ತಿಯನ್ನು ತೋರಿರಲಿಲ್ಲವಾದರೂ ಮುಗಿಸಿದ ಎಲ್ಲಾ ವರ್ಷಗಳಲ್ಲೂ ಸೆಕೆಂಡ್ ಕ್ಲಾಸಿನಲ್ಲಿ ತೇರ್ಗಡೆಯಾಗಿದ್ದ. ಊರಿನಿಂದ ಕಾಲೇಜಿಗೆ ಬೈಕಿನಲ್ಲಿ ಓಡಾಡುತ್ತಿದ್ದ. ಕಾಲೇಜ್ ಡೇ ದಿನ ಕ್ಲಾಸ್‌ಮೇಟ್ ನೀರ್ನಳ್ಳಿಯ ಮೀನಾಕ್ಷಿ ಹೆಗಡೆ ಬೈಕಿಗೆ ಕೈ ಅಡ್ಡ ಇಟ್ಟು ನಿಲ್ಲಿಸಿದ್ದಳು. ಅಲ್ಲಮಪ್ರಭು ಯಾರೊಂದಿಗೂ ಹೆಚ್ಚು ಮಾತನಾಡುತ್ತಿದ್ದವನಲ್ಲ. ಮೀನಾಕ್ಷಿ ಹೆಗಡೆಯೂ ಅಷ್ಟೆ. ಸುಂದರಿಯೆಂದು ಕಾಲೇಜಿನಲ್ಲಿ ಕರೆಸಿಕೊಂಡಿದ್ದರೂ ಯಾರ ಗೊಡವೆಗೂ ಹೋಗುತ್ತಿರಲಿಲ್ಲ. ಮತ್ತು ಕ್ಲಾಸಿನಲ್ಲಿ ಓದುವುದರಲ್ಲಿ ಅವಳೇ ಮುಂದಿದ್ದಳು. ಬೈಕ್ ನಿಲ್ಲಿಸಿದವನನ್ನು, ''ನಾಳೆ ಕುಮಟೆಯ ಬಸ್ ಸ್ಟ್ಯಾಂಡ್ ಬಳಿ ಸಿಗ್ತೀಯಾ?'' ಎಂದು ಏಕಾಏಕಿ ಕೇಳಿದ್ದಳು. ''ಎಷ್ಟೊತ್ತಿಗೆ?'' ಅಲ್ಲಮಪ್ರಭುವಿನ ಬಾಯಿಂದ ಯಾರು ಮಾತನಾಡಿಸಿದ್ದರೋ, ಏನೋ? ಕೇಳಿಬಿಟ್ಟಿದ್ದ. ಯಾಕೆ ಎಂದು ಕೂಡ ಕೇಳಿರಲಿಲ್ಲ. ''ಬೆಳಗ್ಗೆ ಒಂಬತ್ತೂವರೆಗೆ, ಆಯ್ತಾ ಮಿಸ್ ಮಾಡ್ಬೇಡ ಮತ್ತೆ...'' ಎಂದು ತಲೆಬಗ್ಗಿಸಿ ನಡೆದುಬಿಟ್ಟಿದ್ದಳು ಮೀನಾಕ್ಷಿ ಹೆಗಡೆ.

ಮೀನಿನಂಥ ಅವಳ ಕಣ್ಣುಗಳಲ್ಲಿ ಸೆರೆಸಿಕ್ಕವನಂತೆ ಕ್ಷಣ ಒದ್ದಾಡಿಹೋಗಿದ್ದ ಅಲ್ಲಮಪ್ರಭು. ಅವಳು ನಡೆಯುವಾಗ ಉದ್ದನೆಯ ಜಡೆ ಅವಳ ಸುಂದರವಾದ ಕುಂಡಿಯ ಮೇಲೆ ನಾಗರಹಾವಿನಂತೆ ಆ ಕಡೆ ಈ ಕಡೆ ವಯ್ಯಾರ ಮಾಡುತ್ತಿದ್ದದ್ದು ಅಲ್ಲಮಪ್ರಭುವಿನ ಎದೆಯಲ್ಲಿ ಕಂಪನ ಮೂಡಿಸಿತ್ತು. ರಾತ್ರಿ ಎಷ್ಟೊತ್ತಾದರೂ ನಿದ್ದೆ ಬಂದಿರಲಿಲ್ಲ. ಮೀನಾಕ್ಷಿ ಹೆಗಡೆ ಏಕೆ ಕುಮಟೆಗೆ ಕರೆದಿರಬಹುದು? ತನ್ನನ್ನು ಲವ್ ಗಿವ್ ಮಾಡುತ್ತಿರಬಹುದೆ? ಅವಳನ್ನು ಬೈಕಿನಲ್ಲಿ ಕೂರಿಸಿಕೊಂಡು ಅಘನಾಶಿನಿಗೆ ಹೋಗಬೇಕು. ಅಘನಾಶಿಯಿಂದ ಬೋಟ್‌ನಲ್ಲಿ ತದಡಿಗೆ ಹೋಗಬೇಕು. ಟೈಮಿದ್ದರೆ ಮಿರ್ಜಾನ ಕೋಟೆಗೆ ಕರೆದುಕೊಂಡು ಹೋಗಿ ಅವಳ ಕೈಹಿಡಿದು ಓಡಾಡಬೇಕು. ಕೋಟೆಯ ಗುಹೆಯಲ್ಲಿ ಸಾಧ್ಯವಾದರೆ ಅವಳನ್ನು ಬಿಗಿಯಾಗಿ ಅಪ್ಪಿ ಮುದ್ದಿಸಬೇಕು. ಇನ್ನೂ ಟೈಮಿದ್ದರೆ ವಾಪಸ್ಸು ಬರುವಾಗ ಉಂಚಳ್ಳಿ ಫಾಲ್ಸ್‌ಗೂ ಹೋಗಿಬರಬೇಕು. ಬೈಕಿನಲ್ಲಿ ಹೋಗುವುದರಿಂದ ಸುಲಭವಾಗಿ ಎಲ್ಲವನ್ನೂ ಕವರ್ ಮಾಡಿಬಿಡಬಹುದು. ನಾಲ್ಕೈದು ತಿಂಗಳಿಗೊಮ್ಮೆಯಾದರೂ ಅವನು ಖುಷಿಯಿಂದ ಬೈಕ್ ಡ್ರೈವ್ ಮಾಡುತ್ತಿದ್ದ ಸ್ಥಳಗಳೇ ಆಗಿದ್ದವು ಅವು. ಏನೆಲ್ಲಾ ಯೋಚನೆಗಳಲ್ಲಿ ನಿದ್ದೆಗೆ ಬಿದ್ದ ಅಲ್ಲಮಪ್ರಭು ಮಾರನೆಯ ದಿನ ಸರಿ ಡ್ರೆಸ್ ಮಾಡಿಕೊಂಡು ಬೈಕಿನಲ್ಲಿಯೇ ಘಟ್ಟ ಇಳಿದು ಎಂಟು ಮುಕ್ಕಾಲಿಗೆಲ್ಲಾ ಕುಮಟೆಯ ಬಸ್‌ಸ್ಟ್ಯಾಂಡ್ ಮುಂದೆ ನಿಂತಿದ್ದು. ಒಂಬತ್ತು, ಹತ್ತು, ಹನ್ನೊಂದು,